Maintenance of N. R. W. S. Schemes

809. Sri A. D. BILIGOWDA (Maddur).—

Will the Minister for Community Development and Social Welfare be pleased to state :—

(*a*) whether most of the panchayats which have taken up the protected water supply scheme under the N.R.W.S. have stopped running the scheme due to the poor financial position of the panchayats ;

(*b*) if so, whether the Government would make alternative arrangements for running the rural water supply schemes either through the Taluk Development Boards or through the agency of Public Works Department ;

(*c*) whether sanction has been accorded for the implementation of the protected water supply scheme for Chikkaballi village in Mandya Taluk under the N. R. W. S ;

(*d*) whether the Government has any proposal for subsidising and meeting the entire cost of the Rural Water Supply Schemes as most of the panchayats are not in a position to bear the share of contribution demanded of them ?

Sri M. MALLIKARJUNASWAMY (Minister for Community Development and Social Welfare).—

(*a*) There are some instances of this nature.

(*b*) Maintenance of water supply schemes is one of the obligatory functions of the Panchayats—Taluk Development Boards. A prerequisite condition to maintain the scheme is imposed on the local bodies before sanction and the Local Bodies have passed resolutions agreeing to maintain the schemes after completion.

(*c*) No.

(*d*) No.

ಶ್ರೀ ಎ. ಡಿ. ಬಿಳಿಗೌಡ.—ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳ ಮುಖಾಂತರ ತಾಲ್ಲೂಕುಬೋರ್ಡುಗಳ ಮುಖಾಂತರವಾಗಲೀ, ಪಿ. ಡಬ್ಲ್ಯು ಡಿ. ಮುಖಾಂತರವಾಗಲೀ ಗ್ರಾಮಾಂತರ ಪ್ರದೇಶದ ಜನಗಳಿಗೆ ನೀರು ಸರಬರಾಜು ಮಾಡಿದರೆ ಅನುಕೂಲವಾಗುತ್ತದೆ. ಆದ್ದರಿಂದ ಆದನ್ನು ಏರ್ಪಾಟು ಮಾಡುತ್ತೀರಾ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—1959ನೇ ಇಸವಿ ಲೋಕಲ್ ಬೋರ್ಡ್ ಆಕ್ಟ ಪ್ರಕಾರ ಪಂಚಾಯತಿಗಳು ಮತ್ತು ತಾಲ್ಲೂಕುಬೋರ್ಡುಗಳು ಗ್ರಾಮಾಂತರ ಪ್ರದೇಶದ ಹಳ್ಳಿಗಳಿಗೆ ನೀರನ್ನು ಒದಗಿಸತಕ್ಕದ್ದು ಅವರ ಅಬ್ಲಿಗೇಟರಿ ಡ್ಯೂಟಿಯಾಗಿದೆ. ಆದ್ದರಿಂದ ಆದನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯ ಎಗ್ಸಿಕ್ಯುಟೀವ್ ಇಂಜಿನಿಯರು ಮತ್ತು ಡೆಪ್ಯುಟಿ ಕಮಿಷನರು ಇಬ್ಬರೂ ಸೇರಿ ಕೊಂಡು ಗ್ರಾಮಾಂತರ ಪ್ರದೇಶದ ವಾಟರ್ ಸಪ್ಲೈ ವರ್ಕುಗಳನ್ನು ಮೇಂಟೇನ್ ಮಾಡುವುದಕ್ಕೆ ಜವಾಬ್ದಾರರು ಎಂದು ಮಾಡಿದ್ದೇವೆ.

ಶ್ರೀ ಎ. ಡಿ. ಬಿಳಿಗೌಡ.—ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ ಮೇರೆಗೆ ಮಂಡ್ಯ ತಾಲ್ಲೂಕಿನ ಚಿಕ್ಕಬಳ್ಳಿ ಗ್ರಾಮಕ್ಕೆ ರಕ್ಷಿತ ನೀರು ಸರಬರಾಜು ಯೋಜನೆಯನ್ನು ಕಾರ್ಯಗತ ಗೊಳಿಸುವುದಕ್ಕೆ ಮಂಜೂರಾತಿ ನೀಡಲಾಗಿದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ, ಅಲ್ಲಿ ಗ್ರಾಮಸ್ಥರು ಕೊಡಬೇಕಾದ ವಂತಿಕೆಯನ್ನು ಕೊಟ್ಟಿದ್ದಾರೆ. ಮತ್ತು ಅದಕ್ಕೆ ಸಂಬಂಧಪಟ್ಟ

ರೆಕಾರ್ಡ್ ಕೂಡ ಸರ್ಕಾರಕ್ಕೆ ಬಂದಿದೆ. ಅದು ಇನ್ನೂ ಮಂಜೂರಾಗಿಲ್ಲ ಅದನ್ನು ಅಷ್ಟು ಜಾಗ್ರತೆ ಮಂಜೂರು ಮಾಡಿಸಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಬಹುಶಃ ಅದು ಚಿಫ್ ಇಂಜಿನಿಯರ್ ಆಫೀಸ್ ಲೆವೆಲ್‌ನಲ್ಲೋ, ಸೂಪರಿಂಟೆಂಡೆಂಟ್ ಇಂಜಿನಿಯರ್ ಆಫೀಸಿನ ಲೆವೆಲ್‌ನಲ್ಲೋ, ಅಥವಾ ಎಗ್ಸಿಕ್ಯುಟೀವ್ ಇಂಜಿನಿಯರ್ ಆಫೀಸಿನ ಲೆವೆಲ್‌ನಲ್ಲೋ ಇರಬೇಕು ಒಂದು ವೇಳೆ ಅದು ಸರ್ಕಾರಕ್ಕೆ ಬಂದರೂ ಕೂಡ 4 ನೇ ಪಂಚವಾರ್ಷಿಕ ಯೋಜನೆಯಲ್ಲಿ ಆ ಬಾಬಿಗೆ ತಗೆದಿಟ್ಟಿದ್ದ ಹಣವೆಲ್ಲವೂ ಖರ್ಚಾಗಿರುವುದರಿಂದ ಅದನ್ನು 1973-74 ನೇ ಇಸವಿಯಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಮೇಲೆ ಅದನ್ನು ಯೋಜನೆ ಮಾಡಲಾಗುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಪಂಚಾಯತಿಗಳು ನೀರು ಸರಬರಾಜು ಮಾಡುವ ವ್ಯವಸ್ಥೆಯಲ್ಲಿ ಆಗಿಂದಾಗ್ಗೆ ತೊಂದರೆಗಳು ಆಗುತ್ತಿವೆ. ಮತ್ತು ಅನೇಕ ಸಂದರ್ಭಗಳಲ್ಲಿ ಮೆಷಿನ್‌ಗಳು ಕೆಟ್ಟು ಹೋಗುತ್ತಿವೆ. ಅದರಿಂದ ಪಂಚಾಯ್ತಿ ವ್ಯಾಪ್ತಿಯಲ್ಲಿ ಅದನ್ನು ನೇರವಾಗಿ ಸರಿಪಡಿಸುವುದಕ್ಕೆ ಅವಕಾಶ ಇಲ್ಲದೇ ಇರುವುದರಿಂದ ಮತ್ತು ಪಂಚಾಯತಿಗಳು ಆ ಕೆಲಸವನ್ನು ನಿರ್ವಹಿಸುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಅದನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ವಹಿಸಿಕೊಡುವುದಕ್ಕೆ ಏನು ತೊಂದರೆ ಇವೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪಬ್ಲಿಕ್ ವರ್ಕ್ಸ್ ಇಲಾಖೆಯ ಜೊತೆಯಲ್ಲಿ ಪಿ.ಎಚ್.ಇ. ಇದೆ. ಅದರಲ್ಲಿ 16 ಡಿವಿಜನ್‌ಗಳು ಇವೆ. ಅಲ್ಲಿರತಕ್ಕ ಸಿಬ್ಬಂದಿವರ್ಗದವರಿಗೆ ಮೆಷಿನ್ ಯಾವರೀತಿ ಹ್ಯಾಂಡ್ಲ್ ಮಾಡಬೇಕು ಎನ್ನುವ ಬಗ್ಗೆ ಟ್ರೈನಿಂಗ್ ಕೊಟ್ಟು ಅವರಿಗೆ ಸ್ಪೇರ್ ಪಾರ್ಟ್ಸ್ ಎಲ್ಲಾ ಒದಗಿಸಿ ಒಂದುವೇಳೆ ಮೆಷಿನ್ ಕೆಟ್ಟು ಹೋದರೆ ಅದನ್ನು ಅವರು ಸರಿಮಾಡಿಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ಕೆ. ಆರ್. ಶ್ರೀನಿವಾಸಯ್ಯ ನಾಯ್ಡು.—ಹಣದ ಕೊರತೆಯಿಂದ ಆ ಯೋಜನೆಯನ್ನು 1973-74 ನೇ ಸಾಲಿನಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದೀರಿ. ಹಾಗಾದರೆ ತಾವು ರೂರಲ್ ವಾಟರ್ ಸಪ್ಲೈ ಕಾರ್ಪೋರೇಷನ್ ಸ್ಥಾಪನೆ ಮಾಡಿ ಕೆಲವು ರಾಷ್ಟ್ರೀಕೃತ ಬ್ಯಾಂಕುಗಳಿಂದ ಅಥವಾ ಎಲ್.ಐ.ಸಿ. ಯಿಂದ ಸಾಲ ತೆಗೆದುಕೊಂಡು ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಹೇಳಿದಹಾಗೆ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಬೋರವೆಲ್ ಓವರ್‌ಹೆಡ್ ಟ್ಯಾಂಕ್‌ಗಳನ್ನು ಮಾಡಿ ಅದರ ಮುಖಾಂತರ ಒಂದೊಂದು ಹಳ್ಳಿಗೆ 4-5 ನಲ್ಲಿಗಳನ್ನು ಹಾಕಿ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ನೀರು ಸರಬರಾಜು ಮಾಡುವ ವ್ಯವಸ್ಥೆಯಲ್ಲಿ ಕೆಲವು ಹಳ್ಳಿಗಳಿಗೆ ಒಂದು ತಿಂಗಳು ಮಾತ್ರ ನೀರು ಬರುತ್ತದೆ. ಇನ್ನು 10 ತಿಂಗಳು ನೀರಿನ ಮುಖವನ್ನೇ ಕಂಡಿಲ್ಲ. ಟಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಕೂಡ ನೀರು ದೊರೆಯುತ್ತಾ ಇಲ್ಲ. ಇದರಿಂದ ಜನಗಳ ದುಡ್ಡು ಹಾಳಾಗುತ್ತದೆ. ಸರ್ಕಾರದ ದುಡ್ಡು ಹಾಳಾಗುತ್ತದೆ. 100 ಕ್ಕೆ 90 ಕಡೆ ಈ ರೀತಿಯಾಗಿದೆ. ಆದ್ದರಿಂದ ವ್ಯವಸ್ಥಿತವಾಗಿ ನೀರು ಸರಬರಾಜು ಮಾಡಿ ಜನಗಳಿಗೆ ನೀರು ಸಿಕ್ಕುವ ಹಾಗೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಹೇಳಿತಕ್ಕಂಥಾ ಅಂಕಿ ಅಂಶಗಳು ಸರಿಯಿಲ್ಲ. 588 ಸ್ಕೀಮುಗಳಲ್ಲಿ 94 ಸ್ಕೀಮುಗಳು ಮಾತ್ರ ನಿಂತುಹೋಗಿವೆ. ಬಾಕಿ ಯೋಜನೆಗಳು ಸರಿಯಾಗಿ ನಡೆಯುತ್ತಿವೆ.

1.30 P. M.

ಶ್ರೀ ಬಿ. ಬೈರಪ್ಪಾಜಿ.—ಇವತ್ತು ಬಹುತೇಕ ಪಂಚಾಯತುಗಳ ಅವರ ವಂತಿಕೆಯನ್ನು ಕೊಡಲು ಅಸಮರ್ಥರಾಗಿದ್ದಾರೆ. ಇಂಥ ಸಂದರ್ಭದಲ್ಲಿ ಯಾರಾದರೂ ಒಬ್ಬರು ಅವರ ರಕ್ಷಣೆಗೆ ಬರಬೇಕಾಗುತ್ತದೆ. ತಾವು ಈಗ ಹಣಸಹಾಯ ಕೊಡುವುದಿಲ್ಲವೆಂದು ಹೇಳುತ್ತಿದ್ದೀರಿ. ಆದ್ದರಿಂದ ಸರ್ಕಾರದವರೆ ಈ ಕೆಲಸವನ್ನು ವಹಿಸಿಕೊಂಡು ಕುಡಿಯುವ ನೀರನ್ನು ಒದಗಿಸುವುದಕ್ಕೆ ವಿಶೇಷ ರಿಯಾಯಿತಿಯನ್ನು ತೋರಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಎಲೆಕ್ಟ್ರಿಸಿಟಿ ಚಾರ್ಜ್‌ಸನ್ನು ಪಂಚಾಯತುಗಳು ಮತ್ತು ತಾಲ್ಲೂಕು ಬೋರ್ಡಿನವರು ಕೊಡಬೇಕಾಗುತ್ತದೆ. ಈಗಾಗಲೇ ನಾವು 5 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಕಡೆಗಳಲ್ಲಿ ನೀರು ಸರಬರಾಜು ಯೋಜನೆಯನ್ನು ಪಡೆಯುವುದು ಬಿಟ್ಟು ಒಂದೆರಡು ಬೋರ್‌ವೆಲ್‌ಗಳನ್ನು ಹಾಕಿ, ಮತ್ತು ಅದಕ್ಕೆ ಒಂದು ಓವರ್‌ಹೆಡ್ ಟ್ಯಾಂಕ್ ಕಟ್ಟಿ ನೀರು ಸರಬರಾಜು ಮಾಡಿದರೆ ಪಂಚಾಯತುಗಳಿಗೆ ಹೆಚ್ಚು ಖರ್ಚು ನಹ ತಗಲುವುದಿಲ್ಲವೆಂದು ಹೇಳಿದ್ದೇವೆ. ಅದನ್ನು ಮಾಡಬಹುದು.

ಶ್ರೀ ಎ. ಡಿ. ಬಿಳಿಗೌಡ.—ಈ ಚಿಕ್ಕಬಳ್ಳಿ ಯೋಜನೆಯನ್ನು ಮಾಡಬೇಕೆಂದು ಹೇಳಿ ಹಲವಾರು ವರ್ಷಗಳಾದವು. ತಾವು ಬಂದಿಲ್ಲವೆಂದು ಹೇಳುತ್ತಿದ್ದೀರಿ. ಆದ್ದರಿಂದ ಅದನ್ನು ತರಿಸಿ ಬೇಗನೇ ಪರ್ಯಾಲೋಚನೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಮ್ಮ ಪಿ. ಎಚ್. ಇ. ಚೀಫ್ ಇಂಜಿನಿಯರ್ಸ್‌ಗೆ ಯಾವುದನ್ನೂ ಕಳಿಸಬೇಡಿ ಎಂದು ಹೇಳಿದ್ದೇವೆ. ಹಣ ಬಂದ ಮೇಲೆ ಕಳಿಸಿ ಎಂದು ಹೇಳಿದ್ದೇವೆ. ಇಲ್ಲದಿದ್ದರೆ 5ನೇ ಯೋಜನೆಯ ಮೊದಲನೆಯ ವರ್ಷದಲ್ಲಿ ತೆಗೆದುಕೊಳ್ಳಬಹುದು.

Equation of Posts of Professors in Coorg

831. Sri K. H. HANUME GOWDA (Hassan).—

Will the Minister for Education be pleased to state.—

(*a*) the posts to which the Professors working in Coorg after Re-organisation of States on 30-10-1956 have been equated in the Department of Collegiate Education by the decision of the Government :

(*b*) if so, whether the Accountant General has been asked to fix their pay in the new pay scales ?

Sri A. R. BADARINARAYANA (Minister for Education).—

(*a*) The Government have issued orders equating the posts of Professors working in Coorg with those of grade II Professors in the Department of Collegiate Education after re-organisation of States on 30-10-1956.

(*b*) This is under the Consideration of the Government.

ಶ್ರೀ ಕೆ. ಎಚ್. ಹನುಮೆಗೌಡ.—ಈಗ ಕೊಡಗಿನಿಂದ ಬಂದಂತಹ ಪ್ರೊಫೆಸರುಗಳ ಪ್ರೋಸ್ಪೆಕ್ಟ್ ಮಾಡದೆ, ಪೇ ಫಿಕ್ಸ್ ಮಾಡದೆ, ಅದೇ ಕೇಡರಿನಲ್ಲಿರತಕ್ಕಂತಹ ಪ್ರೊಫೆಸರುಗಳಿಗೆ ಪ್ರೊಮೋಶನ್ಸ್ ಕೊಟ್ಟಿದ್ದು ಅಕ್ರಮವಾಗಿದೆ. ಇದನ್ನು ನರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಎ. ಆರ್. ಬದರಿನಾರಾಯಣ.—ಇದರಲ್ಲಿ ಅಕ್ರಮ ಯಾವುದೂ ಮಾಡಿಲ್ಲ. ಅವರು ಹೈಕೋರ್ಟಿಗೆ ಎಲ್ಲಾ ಹೋಗಿದ್ದರಿಂದ ಕೊನೆಗೆ ಫೈನಲ್ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಜುಲೈ 14, 1972ರಲ್ಲಿ ಆಯಿತು. ಈಗ ಪೇ ಫಿಕ್ಸ್ ಮಾಡುವುದಕ್ಕೆ ಆಕೌಂಟೆಂಟ್ ಜನರಲ್ಲಿಗೆ ಬರೆದಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಇದು 15-20 ವರ್ಷಗಳಿಂದ ಸರ್ಕಾರದಲ್ಲಿ ಪೆಂಡಿಂಗ್ ಇತು. ಇದರಲ್ಲಿ ಕೆಲವರು ಈಗಾಗಲೇ ನತ್ತುಹೋಗಿದ್ದಾರೆ ; ಕೆಲವರು ರಿಟೈಯರ್ ಆಗಿದ್ದಾರೆ. ಆದ್ದರಿಂದ ನತ್ತುಹೋದವರ ಕುಟುಂಬಕ್ಕೆ ಮತ್ತು ರಿಟೈಯರ್ ಅದವರಿಗೆ ಈ ಅರಿಯರ್ಸ್ ಕ್ಲೈಮ್ಸ್‌ನ್ನು ಬೇಗನೇ ಸೆಟ್ಲ್ ಮಾಡಿ ಕೊಡಿಸುತ್ತೀರಾ ?